**Code No. 16 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರವೀಣ ದರ್ಜೆ – ಪ್ರಥಮ ಪತ್ರಿಕೆ

## ವೇಗ

ಜುಲೈ, 2015

ವೇಳೆ { ಉಕ್ತಲೇಖನ : 7 ನಿಮಿಷಗಳು
ಲಿಪಿ ಬರಹ : 1 ಗಂಟೆ 45 ನಿಮಿಷಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಮಾನ್ಯ ಸಭಾಧ್ಯಕ್ಷರೇ,

ಅಂತಾರಾಷ್ಟ್ರೀಯ ಮಹಿಳಾ ವರ್ಷವನ್ನು
ಆಚರಿಸುವ ಈ ಸಂದರ್ಭದಲ್ಲಿ "ಗ್ರಾಮೀಣ
ಮಹಿಳೆಯರು ಮತ್ತು ಅವರ ವಿಕಾಸ" ಎಂಬ
ವಿಚಾರ ಸಂಕೀರ್ಣವನ್ನು ಉದ್ಘಾಟಿಸುತ್ತಾ ನಾನು
$\frac{1}{4}$ ಕೆಲವು ಮಾತುಗಳನ್ನು ಆಡ/ಲು
ಇಚ್ಛೆಪಡುತ್ತೇನೆ. ಈ ದಿನ ಪ್ರಾರಂಭವಾದ ಈ
ಸಮಾರಂಭವು ಇನ್ನೂ ಏಳು ದಿನಗಳವರೆಗೆ
ನಡೆಯಲಿದ್ದು ಮಹಿಳೆಯರಿಗಾಗಿಯೇ
ಆಯೋಜಿಸಿರುವ ಕಾರ್ಯಕ್ರಮಗಳಲ್ಲಿ ಇದೇ
ಮೊದಲನೆಯದಾಗಿದೆ ಎಂದು ಹೇಳಲು
$\frac{1}{2}$ ಸಂತೋ/ಷಿಸುತ್ತೇನೆ. ಇನ್ನು ಮುಂದಿನ
ದಿನಗಳಲ್ಲಿ ನಡೆಸುವಂತಹ ಇಂತಹ
ಕಾರ್ಯಕ್ರಮಗಳಿಗೆ ಈ ಸಮಾರಂಭವು
ನಾಂದಿಯಾಗಲಿದೆ.

ನಮಗೆಲ್ಲರಿಗೂ ಗೊತ್ತಿರುವ ಹಾಗೆ
ಗ್ರಾಮಾಂತರ ಪ್ರದೇಶಗಳಲ್ಲಿ ನಾನಾ ರೀತಿಯ
ಸಮಸ್ಯೆಗಳು ಉ/ದ್ಭವಿಸಿ ಜನಸಾಮಾನ್ಯರ $\frac{3}{4}$
ಜೀವನವನ್ನು ಹದಗೆಡಿಸುತ್ತಿದೆ. ಅವರಲ್ಲಿರುವ
ಅಜ್ಞಾನ, ಅವಿದ್ಯೆ ಮತ್ತು ಮೂಢನಂಬಿಕೆಗಳು
ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ನೀಡಲು
ಅಡ್ಡಿಯಾಗುತ್ತಿವೆ. ಸಮಾಜದಲ್ಲಿ ಸ್ತ್ರೀಯರಿಗೆX 1
ಉನ್ನತ ಸ್ಥಾನವು ಲಭಿಸಿಲ್ಲವಾದರೂ ಅವರ
ಕಾರ್ಯನಿರ್ವಹಣಾ ಶಕ್ತಿಯನ್ನು ಯಾರೂ ಸಹ
ಅಲ್ಲಗೆಳೆಯಲಾರರು. ಸಮಾಜದಲ್ಲಿ
ಮಹಿಳೆಯರು ಯಾವುದೇ ಕಾರ್ಯದಲ್ಲಿ

[ Turn over

ತಮ್ಮನ್ನು ತೊಡಗಿಸಿಕೊಂಡರೂ ಸಹ ಅದನ್ನು
1/4 ಯಶಸ್ವಿಯಾಗಿ/ ಪೂರೈಸಬಲ್ಲರು ಎನ್ನುವುದಕ್ಕೆ
ಹಲವಾರು ಉದಾಹರಣೆಗಳಿವೆ. ಇದನ್ನು ಅರ್ಥ
ಮಾಡಿಕೊಳ್ಳದೆ ನಮ್ಮ ಸಮಾಜ ದೊಡ್ಡ ತಪ್ಪನ್ನೇ
ಮಾಡಿದೆಯೆಂದರೆ ತಪ್ಪಾಗಲಾರದು.
ರಾಜಕೀಯ ರಂಗದಲ್ಲಿ ಸಾಕಷ್ಟು
1/2 ಬೆಳವಣಿಗೆಯಾಗಿದ್ದರೂ ಸ್ತ್ರೀಯರ/ ವ್ಯಕ್ತಿ
ಸ್ವಾತಂತ್ರ್ಯದ ಬಗ್ಗೆ ನಾವು ವಿಚಾರ ಮಾಡದೇ
ಇರುವುದು ಬಹಳ ಶೋಚನೀಯವಾದುದೆಂದು
ಹೇಳಲು ಬಯಸುತ್ತೇನೆ.

ಬಹಳ ಹಿಂದಿನ ಕಾಲದಿಂದಲೂ
ಸಮಾಜದಲ್ಲಿ ಮಹಿಳೆಯರಿಗೆ ತಾಯಿಯ ಪವಿತ್ರ
3/4 ಸ್ಥಾನವನ್ನು ನೀ/ಡುತ್ತಾ ಬಂದಿದ್ದೇವೆ. ಆದರೆ
ಇಂದಿನ ಸಮಾಜದಲ್ಲಿ ಮಹಿಳೆಯೆಂದರೆ
ಕೇವಲ ಭೋಗದ ವಸ್ತು ಎಂಬ ಭಾವನೆಯೇ
ಬೆಳೆದು ನಿಂತಿರುವುದು ದುರದೃಷ್ಟಕರವಾದದ್ದು.
ಇತಿಹಾಸದ ಉದ್ದಕ್ಕೂ ಹಿರಿಯ ಜ್ಞಾನಿಗಳೂ,
2 ವಿದ್ವಾಂಸರೂ ಮತ್ತುX ರಾಜಕಾರಣಿಗಳೂ
ದೇಶಕ್ಕೆ ಸೇವೆಯನ್ನು ಸಲ್ಲಿಸಿದ್ದರೆ ಅದಕ್ಕೆ ಮೂಲ
ಕಾರಣ ತಾಯಂದರೇ ಎನ್ನುವುದನ್ನು ಯಾರೂ
ಮರೆಯುವಂತಿಲ್ಲ. ಹಲವು ವರ್ಷಗಳ ಹಿಂದೆ
ಕುಟುಂಬ ಯೋಜನೆ ಎಂದರೆ ನಮ್ಮ ಜನಕ್ಕೆ
1/4 ಒಂದು ರೀತಿಯ ಕುಚೋದ್ಯ/ವಾಗಿತ್ತು. ಜನರು
ಇದರ ಬಗ್ಗೆ ವಿಚಾರ ಮಾಡುವುದೇ ತಪ್ಪು
ಎನ್ನುವಂತ ವಾತಾವರಣ ಇತ್ತು. ಆದರೆ
ಇಂದಿನ ಪ್ರಜ್ಞಾವಂತ ಸಮಾಜ ಸೇವಕರ
ಪ್ರಯತ್ನದಿಂದಾಗಿ ಈ ವಿಚಾರ ಸಂಕೀರ್ಣವನ್ನು
ಉದ್ಘಾಟಿಸುವಂತಹ ಒಂದು ಮಟ್ಟ/ಕ್ಕೆ 1/2
ನಾವುಗಳು ತಲುಪಿದ್ದೇವೆಂದು ಹೇಳಲು
ಇಚ್ಛಿಸುತ್ತೇನೆ. ಈ ವಿಚಾರ ಸಂಕೀರ್ಣವನ್ನು
ಉದ್ಘಾಟಿಸಿದ ಮಾತ್ರಕ್ಕೆ ಗ್ರಾಮೀಣ
ಮಹಿಳೆಯರ ವಿಕಾಸವಾಗುತ್ತದೆ ಎಂದು
ಯಾರಾದರೂ ತಿಳಿದುಕೊಂಡಿದ್ದರೆ ಅದು
ತಪ್ಪಾಗುತ್ತದೆ. ಸಮಾಜದ/ ಒಂದು ಸುಂದರ 3/4
ಸರ್ವಾಂಗೀಣ ಬೆಳವಣಿಗೆಗೆ ನಿಷ್ಠಾವಂತ,
ಪ್ರಜ್ಞಾವಂತ ಸಮಾಜ ಸೇವಕ ಮತ್ತು
ಸೇವಕಿಯರ ನಿಸ್ವಾರ್ಥ ಸೇವೆಯು
ಅತ್ಯಾವಶ್ಯಕವಾಗಿರುತ್ತದೆ. ಸಮಾಜದ ಎಲ್ಲಾ
ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರವೇನು
ಎXನ್ನುವುದನ್ನು ಯೋಚನೆ ಮಾಡಿ ನೋಡಿದರೆ 3
ಇಂದಿನ ವಿಚಾರ ಸಂಕೀರ್ಣದ ಫಲಶೃತಿ
ಹೊರಬೀಳುತ್ತದೆ. ‘ಸಮಾಜ ವಿಕಾಸ’
ಎಂಬುದು ಕೇವಲ ಒಂದೆರಡು ದಿವಸಗಳಲ್ಲಿ
ಅಣಿಮಾಡತಕ್ಕ ವಿಷಯವಲ್ಲ. ಇಂತಹ ವಿಚಾರ
ಸಂಕೀ/ರ್ಣಗಳನ್ನು ಮಾಡಿದ ಮಾತ್ರದಿಂದಲೇ 1/4
ನಮ್ಮ ಕರ್ತವ್ಯ ಮುಗಿಯುತ್ತದೆ ಎಂದು
ಹೇಳುವ ಹಾಗೆ ಇಲ್ಲ. ಯಾಕೆಂದರೆ ಇದು

ನಿರಂತರವಾಗಿ ಗ್ರಾಮೀಣ ಜನರ ಜೀವನದಲ್ಲಿ
ಹಾಸುಹೊಕ್ಕಾಗಿ ಬೆಳೆಯುವಂತಾಗಬೇಕು.
$\frac{1}{2}$ ಇದನ್ನು ಒಂದು ರೀತಿ/ಯಲ್ಲಿ
ಮಹತ್ಕಾರ್ಯವೆಂದು ನೀವೆಲ್ಲರೂ
ಪರಿಗಣಿಸಬೇಕೆಂದು ಹೇಳುತ್ತೇನೆ. ಮುಖ್ಯವಾಗಿ
ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಸಾಮಾಜಿಕ
ಕಾರ್ಯಗಳಲ್ಲಿ ಭಾಗವಹಿಸತಕ್ಕ ಮಹಿಳೆಯರು
$\frac{3}{4}$ ದೊರೆಯುವುದು ಬಹಳ ವಿರಳ. ಸಮಾಜ/
ಸೇವಕಿಯರು ಮಹಿಳಾ ಸಂಘಟನೆಯನ್ನು
ಮಾಡಿ ಮುಂದೆ ಬಂದರೆ ಮಾತ್ರ ಸಮಾಜ
ವಿಕಾಸಕ್ಕೆ ನಾಂದಿಯಾಗುತ್ತದೆ ಎಂದು ನಾನು
ಮನಃಪೂರ್ವಕವಾಗಿ ಹೇಳಲು ಬಯಸುತ್ತೇನೆ.

ಅಂತಾರಾಷ್ಟ್ರೀಯ ಮಹಿಳಾ ವರ್ಷದಲ್ಲಿ
4 ಮಹಿಳೆಯಲ್ಲಿ ಜಾಗೃXತಿ ಉಂಟಾಗಿ
ಸಮಾಜದಲ್ಲಿನ ಮೂಢನಂಬಿಕೆಗಳ
ಸಂಕೋಲೆಯನ್ನು ಕಿತ್ತೊಗೆದು ಸಮಾಜದಲ್ಲಿ
ಮುಂದೆ ಸಾಗಬೇಕು. ಇದರಿಂದ ಅವರು
ಜೀವನದಲ್ಲಿ ಒಂದು ಸುಧಾರಣೆಯನ್ನು ಕಂಡು
ನಾಗರೀಕತೆಗೆ ಹೊಂದುಕೊಂಡು
$\frac{1}{4}$ ಬದಲಾವಣೆಗಳು/ ಆದರೆ ಆಗ ನಾವು ಅದನ್ನು
ಮಹಿಳಾ ವರ್ಷದ ಮೊದಲನೆ ಹೆಜ್ಜೆ ಎಂದು
ಭಾವಿಸಬಹುದು. ಮಹಿಳೆಯು ಪುರುಷನ
ಒಂದು ಅವಿಭಾಜ್ಯ ಅಂಗವೆಂಬುದನ್ನು ಎಲ್ಲರೂ
ಒಪ್ಪಲೇಬೇಕಾದ ವಿಷಯ. ಇದನ್ನು ಸಮಾಜವು
ಅರಿತು ಹೊಸ ಸ/ಧಾರಣೆಗಳನ್ನು $\frac{1}{2}$
ಕಾರ್ಯರೂಪಕ್ಕೆ ತಂದು ಸಮಾಜದಲ್ಲಿರುವ
ಮಹಿಳೆಯರು ಮತ್ತು ಪುರುಷರ ನಡುವಿನ
ಅಸಮಾನತೆಯನ್ನು ಹೋಗಲಾಡಿಸಲು
ಪ್ರಯತ್ನಿಸಬೇಕೆಂದು ಹೇಳಲು ಇಚ್ಛಿಸುತ್ತೇನೆ.

ಸಮಾಜ ಸುಧಾರಣೆಯ ಫಲಶೃತಿ/ $\frac{3}{4}$
ಮಿಡಿದು ಅಲ್ಪ ಸ್ವಲ್ಪ ಮಟ್ಟಿಗೆ ಮಹಿಳೆಯರು
ವಿದ್ಯಾವಂತರಾಗುತ್ತಿದ್ದಾರೆ. ಇಂಥಹ ವಿದ್ಯಾವಂತ
ಮಹಿಳೆಯರನ್ನು ನಾವು ಇಂದು ಎಲ್ಲಾ
ರಂಗಗಳಲ್ಲಿಯೂ ನೋಡುತ್ತಿದ್ದೇವೆ. ಇವರ
ಕಾರ್ಯಕ್ಷಮತೆಯನ್ನು ಗುರುತಿಸಿ ವಾಣಿಜ್ಯ
ಬ್ಯಾಂಕಗಳXವರು ಇವರಿಗೆ ಹೆಚ್ಚಿನ 5
ಸ್ಥಾನಮಾನಗಳನ್ನು ನೀಡುತ್ತಿದ್ದಾರೆ. ಸೂಕ್ಷ್ಮ
ಮತ್ತು ಅತಿ ಸೂಕ್ಷ್ಮತೆಯ ಕೆಲಸಗಳಿಗೆ
ಮಹಿಳೆಯರನ್ನೇ ಹೆಚ್ಚಾಗಿ ನೇಮಿಸಿಕೊಳ್ಳಲಾಗುತ್ತಿದೆ
ಎನ್ನುವುದು ಒಂದು ಸಂತೋಷಕರವಾದ ಸಂಗತಿ.
ಆದರೂ ವಿ/ದ್ಯಾವಂತ ಮಹಿಳೆಯರಲ್ಲೂ $\frac{1}{4}$
ನಿರುದ್ಯೋಗದ ಸಮಸ್ಯೆಯು ಇನ್ನೂ ಹೆಚ್ಚಾಗಿ
ಕಂಡುಬರುತ್ತಿರುವುದು ಬಹಳ ವಿಷಾದಕರವಾದ
ಸಂಗತಿಯಾಗಿದೆ. ಸ್ವಂತ ಉದ್ಯೋಗವನ್ನು
ಪ್ರಾರಂಭ ಮಾಡುವಂಥ ಮಹಿಳೆಯರಿಗೆ

$\frac{1}{2}$ ಹಣಕಾಸಿನ ನೆರವ/ನ್ನು ನೀಡಲು ವಾಣಿಜ್ಯ ಬ್ಯಾಂಕುಗಳವರು ಮುಂದೆ ಬರುತ್ತಿರುವುದು ಮಹಿಳಾ ವರ್ಷದ ಸಂದರ್ಭದಲ್ಲಿ ಅತ್ಯಂತ ಸಂತೋಷದಾಯಕವಾದ ಸಂಗತಿಯಾಗಿದ್ದು ಅದನ್ನು ನಾನು ಸ್ವಾಗತಿಸುತ್ತೇನೆ. ಇಂಥಹ

$\frac{3}{4}$ ಅವಕಾಶಗಳನ್ನು ಹೆಚ್ಚು ಹೆಚ್ಚಾಗಿ/ ಉಪಯೋಗಿಸಿಕೊಂಡು ವಿದ್ಯಾವಂತ ಮಹಿಳೆಯರು ಸ್ವಂತ ಉದ್ಯಮಗಳನ್ನು ಸ್ಥಾಪಿಸುವುದರೊಂದಿಗೆ ದೇಶದ ಆರ್ಥಿಕ ಸಂಪತ್ತನ್ನು ಹೆಚ್ಚಿಸುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತೆ ನಾನು ಈ

6 ಸಂದರ್ಭದಲ್ಲಿ ಎಲ್ಲಾ ವಿದ್ಯಾXವಂತ ಮಹಿಳೆಯರಿಗೆ ಕರೆಯನ್ನು ನೀಡಲು ಇಷ್ಟಪಡುತ್ತೇನೆ.

ಇನ್ನು ಮಹಿಳೆಯರ ಜೀವನದ ಬಗ್ಗೆ ಅತಿಮುಖ್ಯವಾಗಿ ಪ್ರಸ್ತಾಪಿಸಬೇಕಾಗಿದೆ. ಇತ್ತೀಚೆಗೆ ಉದ್ಯೋಗಸ್ಥ ಮಹಿಳೆಯರನ್ನು

$\frac{1}{4}$ ವಿವಾಹವಾಗುವುದು ನಮ್ಮ ಸಮಾಜದ/ಲ್ಲಿ ಒಂದು ದೊಡ್ಡ ಸಮಸ್ಯೆಯಾಗಿದೆ. ಸಮಾಜದ ಸುಧಾರಣೆಯಿಂದಾಗಿ ಮತ್ತು ಆರ್ಥಿಕ ಸಮಾನತೆಯನ್ನು ಸರಿದೂಗಿಸಲು ಉದ್ಯೋಗಸ್ಥ ಮಹಿಳೆಯರನ್ನು ಕೈಹಿಡಿದು ಅನೇಕ ಜನ ವಿದ್ಯಾವಂತರು ಮುಂದೆ ಬರುತ್ತಿದ್ದಾರೆ.

ಆದುದರಿಂ/ದ, ಮಹಿಳೆಯರು ಮತ್ತು $\frac{1}{2}$

ಪುರುಷರು ಅವರವರ ಹಕ್ಕುಬಾಧ್ಯತೆಗಳನ್ನು ಮತ್ತು ಜೀವನದ ಮೌಲ್ಯಗಳನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಮಾತ್ರ ತಮ್ಮ ಜೀವನದ ಭವಿಷ್ಯವನ್ನು ಸರಿಯಾಗಿ ರೂಪಿಸಿಕೊಂಡು

ಸಮಾಜದಲ್ಲಿ ಒ/ಳ್ಳೆಯ ಬಾಳುವೆಯನ್ನು $\frac{3}{4}$

ನಡೆಸಲು ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ನನ್ನನ್ನು ಇಲ್ಲಿಗೆ ಬರಮಾಡಿಕೊಂಡು ಇಷ್ಟು ಮಾತನಾಡಲು ಅನುವು ಮಾಡಿಕೊಟ್ಟ ನಿಮ್ಮೆಲ್ಲರಿಗೂ

ವಂದನೆಗಳು.X 7